<u>**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**</u>

ಸಿ.ಸಿ. ನಂಃ 724/2017 ಸಿಡಬ್ಲೂ : 7 ಪಿಡಬ್ಲೂಃ 2

ಪ್ರಮಾಣವಚನ ಬೋಧಿಸಲಾಯಿತು ದಿಃ 29-09-2025

ಹೆಸರು : ಗೌರಿಶಂಕರ್

ತಂದೆ ಹೆಸರು : ಗುರಪ್ಪ

ವಯಸ್ಸು : 34 ವರ್ಷ

ಉದ್ಯೋಗ : ಅಬಕಾರಿ ಮುಖ್ಯ ಪೇದೆ, ಚಿಂಚೋಳ್ಳಿ

ವಾಸಸ್ಥಳ : ಚಿಂಚೋಳ್ಳಿ

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು 25-07-2015 ರಿಂದ 05-02-2024 ರವರೆಗೆ ಸೇಡಂ ವಲಯದಲ್ಲಿ ಅಬಕಾರಿ ಪೇದೆ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ11-06-2017 ರಂದು ನಮ್ಮ ಅಬಕಾರಿ ನೀರಿಕ್ಷಕರೊಂದಿಗೆ ನಾನು ಮತ್ತು ಚಾ ಸಾ 3 ಮತ್ತು 6 ರವರು ಕೂಡಿಕೊಂಡು ಮೊದಲು ವೆಂಕಟಾಪುರ, ಹಿಂದಿರಾನಗರ, ಬಸಲೋದಿ ತಾಂಡಾದಲ್ಲಿ ದಾಳಿ ಮಾಡಿಕೊಂಡು ನಂತರ ಕಂಡರಾಯನ ಪಲ್ಲಿಗೆ ಹೋಗಿ ರಾಮಚಂದ್ರ ದೇವರಕೊಂಡ ಅವರ ಅಂಗಡಿಗೆ ಹೋಗಿ ತಪಾಸಣೆ ಮಾಡಲಾಗಿ ಅಲ್ಲಿ ಬೆಲ್ಲ, ಸ್ಪಟಿಕಾ, ಹಾಗೂ ನವಸಾಗರ ಸಿಕ್ಕಿತ್ತು. 16 ಪೆಟ್ಟಿಗೆಯಲ್ಲಿ ತಲಾ ಒಂದು ಪೆಟ್ಟಿಗೆಯಲ್ಲಿ ತಲಾ 19 ಕೆ ಜಿ ಯಂತೆ ಒಟ್ಟು 300 ಕೆ ಜಿ ಬೆಲ್ಲ ಇತ್ತು. 4 ಪೆಟ್ಟಿಗೆಯಲ್ಲಿ ತಲಾ 25 ಕೆ ಜಿಯಂತೆ 100 ಕೆ ಜಿ ನವಸಾಗರ ಇತ್ತು. ಅದೇ ರೀತಿ 2 ಚೀಲಗಳಲ್ಲಿ ತಲಾ 50 ಕೆ ಜಿಯಂತೆ ಒಟ್ಟು 100 ಕೆ ಜಿ ಸ್ಪಟಿಕ ಇತ್ತು. ನಂತರ ಸದರಿ ವ್ಯಕ್ತಿಯ ಹೆಸರನ್ನು ವಿಚಾರಿಸಲಾಗಿ ಆತನು ತನ್ನ ಹೆಸರು ಜಯಪ್ರಕಾಶ ತಂದೆ ರಾಮಚಂದ್ರ ದೇವರಕೊಂಡ ಎಂದು ತಿಳಿಸಿರುತ್ತಾರೆ. ಎಲ್ಲಾ ಮು ಮಾನ್ನು ವಶಕ್ಕೆ ತೆಗೆದುಕೊಂಡು ಅದರಲ್ಲಿ ಎಲ್ಲಾ 16 ಪೆಟ್ಟಿಗೆಗಳಲ್ಲಿ ತಲಾ 50 ಗ್ರಾಂ ನಷ್ಟು ಒಟ್ಟು 800 ಗ್ರಾಂ ಬೆಲ್ಲವನ್ನು, 200 ಗ್ರಾಂ ನಂತೆ 4 ಪೆಟ್ಟಿಗೆಗಳಲ್ಲಿ ತಲಾ 200 ಗ್ರಾಂ ಹಿಗೆ ಒಟ್ಟು 800 ಗ್ರಾಂ ಮತ್ತು 2 ಚಿಲಗಳಲ್ಲಿ 100 ಗ್ರಾಂ ನಂತೆ ಒಟ್ಟು 200 ಗ್ರಾಂ ಸ್ಪಟಿಕವನ್ನು ರಾಸಾಯನಿಕ ಪರೀಕ್ಷೆ ಕುರಿತು ಪ್ರತ್ಯಕವಾಗಿ ವಶಕ್ಕೆ ಪಡೆದುಕೊಂಡು ಅದನ್ನು ಸೀಲು ಮಾಡಲಾಗಿದೆ. ನಂತರ ಆರೋಪಿತನಿಗೆ ದಸ್ತಗಿರಿ ಮಾಡಿ ಮು ಮಾ ನ್ನು ನಮ್ಮ ವಶಕ್ಕೆ ಪಡೆದುಕೊಂಡಿರುತ್ತೇವೆ. ಸ್ಥಳದಲ್ಲಿ 11.30 ಗಂಟೆಯಿಂದ 12.30 ಗಂಟೆಯ ವೆರಗೆ

ಪಂಡನಾಮೆಯನ್ನು ಬರೆದು ಮುಗಿಸಲಾಯಿತು. ನಂತರ ನಮ್ಮ ಕಛೇರಿಗೆ ಬಂದು ಮುಂದಿನ ಪ್ರಕ್ರಿಯೇ ಮಾಡಿದೆವು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ. ಜಪ್ತಿ ಪಡಿಸಿಕೊಂಡಂತಹ ಮು ಮಾನ್ನು ನೋಡಿದರೆ ಗುರುತಿಸಿಕೊಳ್ಳುತ್ತೇನೆ.

**ಪಾಟೀಸವಾಲುಃ** ಆರೋಪಿತರ ಪರ ಶ್ರೀ ಎ ಎಸ್ ಡಿ ವಕೀಲರಿಂದಃ

ಕಂಡೆರಾಯನ ಪಲ್ಲಿ ಗ್ರಾಮದಲ್ಲಿ ಸುಮಾರು 600 ರಿಂದ 700 ಜನರು ವಾಸಿಸುತ್ತಾರೆ ಎಂದರೆ ಸರಿ. ರಾಮಚಂದ್ರ ದೇವರಕೊಂಡ ರವರ ಮನೆ ಇದ್ದ ಬಗ್ಗೆ ಗ್ರಾಮಸ್ಥರಿಗೆ ಕೇಳಿಲ್ಲ. ನಾವು ಘಟನಾ ಸ್ಥಳಕ್ಕೆ ಹೋದಾಗ ಎಷ್ಟು ಜನರು ಇದ್ದರು ಎಂದು ನನ್ನ ಹೇಳಿಕೆಯಲ್ಲಿ ಬರೆಸಿಲ್ಲ. ನಮ್ಮ ತನಿಖೆಯಲ್ಲಿ ನಮ್ಮನ್ನು ಹಾಗೂ ಪಂಚರನ್ನು ಹೋರತು ಪಡಿಸಿ ನಾನಾಗಲಿ ಹಾಗೂ ನನ್ನ ಸಾಹೇಬರು ಆಗಲಿ ಬೇರೆ ಯಾರದೂ ಸಹ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಸದರಿ ಪೆಟ್ಟಿಗೆ ರಟ್ಟಿನ ಪೆಟ್ಟಿಗೆಗಳಾಗಿದ್ದವು. ಸದರಿ ಪೆಟ್ಟಿಗೆಗಳು ನ್ಯಾಯಾಲಯದಲ್ಲಿ ಹಾಜರು ಪಡಿಸಿಲ್ಲ. ನವಸಾಗರ ಚೀಲಗಳು ಸಹ ನ್ಯಾಯಾಲಯದಲ್ಲಿ ಹಾಜರು ಪಡಿಸಿಲ್ಲ. ಅದೇರೀತಿ ಸ್ಪಟಿಕ ಹಾಗೂ ಅದರ ಚೀಲವನ್ನು ನ್ಯಾಯಲಯದಲ್ಲಿ ಹಾಜರು ಪಡಿಸಿಲ್ಲ.

ದಿಃ11-06-2017 ರಂದು ನಮ್ಮ ಅಬಕಾರಿ ನೀರಿಕ್ಷಕರೊಂದಿಗೆ ನಾನು ಮತ್ತು ಚಾ ಸಾ 3 ಮತ್ತು 6 ರವರು ಕೂಡಿಕೊಂಡು ಮೊದಲು ವೆಂಕಟಾಪುರ, ಹಿಂದಿರಾನಗರ, ಬಸಲೋದಿ ತಾಂಡಾದಲ್ಲಿ ದಾಳಿ ಮಾಡಿಕೊಂಡು ನಂತರ ಕಂಡರಾಯನ ಪಲ್ಲಿಗೆ ಹೋಗಿ ರಾಮಚಂದ್ರ ದೇವರಕೊಂಡ ಅವರ ಅಂಗಡಿಗೆ ಹೋಗಿ ತಪಾಸಣೆ ಮಾಡಲಾಗಿ ಅಲ್ಲಿ ಬೆಲ್ಲ, ಸ್ಪಟಿಕಾ, ಹಾಗೂ ನವಸಾಗರ ಸಿಕ್ಕಿತ್ತು. 16 ಪೆಟ್ಟಿಗೆಯಲ್ಲಿ ತಲಾ ಒಂದು ಪೆಟ್ಟಿಗೆಯಲ್ಲಿ ತಲಾ 19 ಕೆ ಜಿ ಯಂತೆ ಒಟ್ಟು 300 ಕೆ ಜಿ ಬೆಲ್ಲ ಇತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. 4 ಪೆಟ್ಟಿಗೆಯಲ್ಲಿ ತಲಾ 25 ಕೆ ಜಿಯಂತೆ 100 ಕೆ ಜಿ ನವಸಾಗರ ಇತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದೇ ರೀತಿ 2 ಚೀಲಗಳಲ್ಲಿ ತಲಾ 50 ಕೆ ಜಿಯಂತೆ ಒಟ್ಟು 100 ಕೆ ಜಿ ಸ್ಪಟಿಕ ಇತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಸದರಿ ವ್ಯಕ್ತಿಯ ಹೆಸರನ್ನು ವಿಚಾರಿಸಲಾಗಿ ಆತನು ತನ್ನ ಹೆಸರು ಜಯಪ್ರಕಾಶ ತಂದೆ ರಾಮಚಂದ್ರ ದೇವರಕೊಂಡ ಎಂದು ತಿಳಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಎಲ್ಲಾ ಮು ಮಾನ್ನು ವಶಕ್ಕೆ ತೆಗೆದುಕೊಂಡು ಅದರಲ್ಲಿ ಎಲ್ಲಾ 16 ಪೆಟ್ಟಿಗೆಗಳಲ್ಲಿ ತಲಾ 50 ಗ್ರಾಂ ನಷ್ಟು ಒಟ್ಟು 800 ಗ್ರಾಂ ಬೆಲ್ಲವನ್ನು, 200 ಗ್ರಾಂ ನಂತೆ 4 ಪೆಟ್ಟಿಗೆಗಳಲ್ಲಿ ತಲಾ 200 ಗ್ರಾಂ ಹಿಗೆ ಒಟ್ಟು 800 ಗ್ರಾಂ ಮತ್ತು 2

ಚಿಲಗಳಲ್ಲಿ 100 ಗ್ರಾಂ ನಂತೆ ಒಟ್ಟು 200 ಗ್ರಾಂ ಸ್ಪಟಿಕವನ್ನು ರಾಸಾಯನಿಕ ಪರೀಕ್ಷೆ ಕುರಿತು ಪ್ರತ್ಯಕವಾಗಿ ವಶಕ್ಕೆ ಪಡೆದುಕೊಂಡು ಅದನ್ನು ಸೀಲು ಮಾಡಲಾಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಆರೋಪಿತನಿಗೆ ದಸ್ತಗಿರಿ ಮಾಡಿ ಮು ಮಾ ನ್ನು ನಮ್ಮ ವಶಕ್ಕೆ ಪಡೆದುಕೊಂಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸ್ಥಳದಲ್ಲಿ 11.30 ಗಂಟೆಯಿಂದ 12.30 ಗಂಟೆಯ ವೆರಗೆ ಪಂಡನಾಮೆಯನ್ನು ಬರೆದು ಮುಗಿಸಲಾಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ನಮ್ಮ ಕಛೇರಿಗೆ ಬಂದು ಮುಂದಿನ ಪ್ರಕ್ರಿಯೇ ಮಾಡಿದೆವು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಜಪ್ತಿ ಪಡಿಸಿಕೊಂಡಂತಹ ಮು ಮಾನ್ನು ನೋಡಿದರೆ ಗುರುತಿಸಿಕೊಳ್ಳುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಮು ಮಾ ಹಾಗೂ ಆರೋಪಿತರಿಗೂ ಯಾವುದೇ ಸಂಬಂದ ಇಲ್ಲದಿದ್ದರೂ ಸಹ ಮೇಲಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**